# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (133)37
ಸದಸ್ಯರ ಹೆಸರು : ಶ್ರೀಮತಿ ಹೇಮಲತಾ ನಾಯಕ (ವಿಧಾನಸಭಾ ಕ್ಷೇತ್ರ) )
ಉತ್ತರಿಸುವ ದಿನಾಂಕ : 08-12-2025
ಉತ್ತರಿಸುವ ಸಚಿವರು : ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ್ಯಾಂತ ಶಾಲಾ ಮಕ್ಕಳಿಗೆ ಪಾಠ್ಯ ವಿಷಯದ ಬದಲಿ ನಿಯಮಿತ ತರಗತಿಗಳ ಸಮಯದಲ್ಲಿ NEET AND JEE ತರಬೇತಿ ನೀಡುತ್ತಿರುವ ವಿಷಯ ಸರ್ಕಾರದ ಗಮನಕ್ಕ ಬಂದಿದೇಯೇ; ಈ ಕರ್ತವ್ಯ ಲೋಪಕ್ಕೆ ಕಾರಣರಾದವರು ಯಾರು; | ಗಮನಕ್ಕೆ ಬಂದಿರುವುದಿಲ್ಲ. |
| ಆ) | ತಾಂತ್ರಕ ಪರೀಕ್ಷೆಗಳಿಗೆ ಒತ್ತಾಯಪೂರ್ವಕವಾದ ತರಬೇತಿ ನೀಡುವ ಮೂಲ ಮಕ್ಕಳ ಆಯ್ಕೆ ಸ್ವಾತಂತ್ರ್ಯ ಬೆಳವಣಿಗೆಗೆ ಅವಶ್ಯಕವಾದ ಸಮಗ್ರ ಶಿಕ್ಷಣ ಹಾಗೂ ನಿತ್ಯ ಪಠ್ಯಕ್ರಮಕ್ಕೆ ವ್ಯತಿರಿಕ್ತ ಒತ್ತಡ ಹಾಕಲಾಗುತ್ತಿದೆ: ಮಕ್ಕಳ ಹಕ್ಕುಗಳ ಉಲ್ಲಂಘನೆ ಬಗ್ಗೆ ಸರ್ಕಾರದ ಸ್ಪಷ್ಟನೆ ಏನು: | ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಯಾವುದೇ ವಿದ್ಯಾರ್ಥಿಗಳಿಗೆ ಒತ್ತಾಯ ಪೂರ್ವಕವಾಗಿ ತಾಂತ್ರಿಕ ತರಗತಿಗಳಿಗೆ ಹಾಜರಾಗುವಂತೆ ತಿಳಿಸಲಾಗಿರುವುದಿಲ್ಲ.<br>ಖಾಸಗಿ ಕಾಲೇಜುಗಳ ಬಗ್ಗೆ ಯಾವುದೇ ದೂರುಗಳು ಸ್ವೀಕೃತವಾಗಿರುವುದಿಲ್ಲ. |
| ಇ) | ಈ ತರಬೇತಿ ಕೇಂದ್ರಗಳಲ್ಲಿ ಮಕ್ಕಳ ಸುರಕ್ಷತೆ ಆಹಾರ ವ್ಯವಸ್ಥೆ ವಿಶ್ರಾಂತಿ ಸೇರಿದಂತೆ ಮೂಲಭೂತ ಹಕ್ಕುಗಳನ್ನು ನಿರ್ಲಕ್ಷ್ಯ ಮಾಡಲಾಗುತ್ತಿದೆಯೆ ಎಂಬುದರ ಬಗ್ಗೆ ಯಾವುದೇ ಸಮೀಕ್ಷೆ ನಡೆಸಲಾಗುದೆಯೇ: | ಇಲಾಖಾ ವತಿಯಿಂದ ನೀಡುವ ತರಬೇತಿಯು ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಮಾತ್ರ ಸೀಮಿತವಾಗಿರುವುದರಿಂದ ಹಾಗೂ ಎಲ್ಲಾ ಮೂಲಭೂತ ಸೌಕರ್ಯಗಳೊಂದಿಗೆ ತರಬೇತಿ ನೀಡುತ್ತಿರುವ ಕಾರಣ ಸಮೀಕ್ಷೆ ನಡೆಸಿರುವುದಿಲ್ಲ. |
| ಈ) | ಈ ತಂತ್ರಬದ್ಧ ತರಬೇತಿಯಲ್ಲಿ ಭಾಗವಹಿಸದ ಮಕ್ಕಳಿಗೆ ಭೇದಭಾವ ಪಠ್ಯಚಟುವಟಿಕೆಗಳಲ್ಲಿ ನಂತರದ ಹಿನ್ನಡೆ ನಡೆಯುತ್ತಿರುವುದಾದರೆ, ಅವರ ಶೈಕ್ಷಣಿಕ ಹಕ್ಕುಗಳನ್ನು ರಕ್ಷಿಸಲು ಸರ್ಕಾರ ತೆಗೆದುಕೊಳ್ಳುತ್ತಿರುವ ಕ್ರಮವೇನು? | ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ನಡೆಸಲಾಗುತ್ತಿರುವ ತರಬೇತಿಯಲ್ಲಿ ಯಾವುದೇ ಭೇದಭಾವ ಮಾಡಿರುವುದಿಲ್ಲ. |

ಸಂಖ್ಯೆ: ಇಪಿ 393 ಡಿಜಿಡಬ್ಲ್ಯೂ 2025

(ಎಸ್. ಮಧು ಬಂಗಾರಪ್ಪ)
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು